ಶ್ರೀ ಬಿ. ಎಸ್. ಯಡಿಯೂರಪ್ಪ :- ಮಾನ್ಯ ಅಧ್ಯಕ್ಷರೇ, ಇದಕ್ಕೆ ನಿಗದಿ ಯಾಗಿರುವ ಅಂದಾಜು ಹಣ 79 ಲಕ್ಷ ರೂಪಾಯಿಗಳು ಎಂದು ಹೇಳುತ್ತೀರಿ. ಸಪೋಸ್ ಆ ಸೈಟ್ ಬಗ್ಗೆ ಗೊಂದಲ ಇದ್ದರೆ ಮೈಸೂರು ಇಷ್ಟೊಂದು ವಿಶಾಲವಾಗಿದೆ, ಬಹುಶಃ ನಿಮಗೆ ಎಲ್ಲಿ ಬೇಕಾದರೂ ಜಾಗ ಸಿಗುತ್ತದೆ. ಆ ಒಂದು ದೊಡ್ಡ ನಗರದಲ್ಲಿ ಉತ್ತಮವಾದ ಲೈಬ್ರರಿಯ ಅಗತ್ಯ ಇದೆ. ಆ ಸೈಟ್ ಬಗ್ಗೆ ಗೊಂದಲ ಇದ್ದರೆ ಬೇರೆ ಯಾವುದಾದರೂ ಒಂದು ಕಟ್ಟಡ ಕಟ್ಟುವುದಕ್ಕೆ ಶುರುಮಾಡಿ ಮಾಡಿಸಿಕೊಡಿ.

ಶ್ರೀ ಆರ್. ಕೃಷ್ಣಪ್ಪ :- ಮಾನ್ಯ ಅಧ್ಯಕ್ಷರೇ, ಅಲ್ಲಿ ಲೈಬ್ರರಿ ಕಟ್ಟಡ ಕಟ್ಟುವುದಕ್ಕೆ ಬಹಳ ಸೂಕ್ತವಾದ ಜಾಗ ಎಂದು ನನ್ನ ಭಾವನೆ. ನಾನು ಸ್ಥಳ ಪರಿಶೀಲನೆ ಮಾಡಿದ್ದೇನೆ. ಕಾರಣಾಂತರಗಳಿಂದ ಇದರಲ್ಲಿ ತೊಡಕು ಉಂಟಾಗಿದ್ದರಿಂದ ಮುಖ್ಯ ಮಂತ್ರಿಗಳು ಮತ್ತು ಮುಖ್ಯ ಕಾರ್ಯದರ್ಶಿಗಳ ಹತ್ತಿರ ಅದು ಚರ್ಚೆಯಲ್ಲಿರುವುದರಿಂದ ಆದಷ್ಟು ಬೇಗ ಇದರ ಬಗ್ಗೆ ತೀರ್ಮಾನವಾಗುತ್ತಲೇ ಆ ಜಾಗದಲ್ಲಿ ಕಟ್ಟಡ ಕಟ್ಟಲು ಪ್ರಾರಂಭ ಮಾಡು ತ್ತೇವೆ. ಇಲ್ಲದಿದ್ದರೆ ಬೇರೆ ಜಾಗವನ್ನು ತೆಗೆದುಕೊಂಡು ಕಟ್ಟುವಂಥ ಪ್ರಯತ್ನ ಮಾಡುತ್ತೇವೆ.

ಶ್ರೀ ಎ. ರಾಮದಾಸ್ :- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಇಷ್ಟೆ. ಸರ್ಕಾರದ್ದು ಒಂದು ರೀತಿಯಲ್ಲಿ ಸಮಸ್ಯೆ. ಮೇಲ್ನೋಟಕ್ಕೆ ಯಾವುದೇ ಸಮಸ್ಯೆ ಇಲ್ಲ ಎಂದು ಹೇಳಿದರು. ಈಗಾಗಲೇ ನಾವು ಅಲ್ಲಿ ಲೈಬ್ರರಿ ಕಟ್ಟಲಿಕ್ಕೆ ಪ್ರಾರಂಭಮಾಡಿದ್ದೇವೆ ಎಂದೂ ಸಹ ಹೇಳಿದ್ದಾರೆ. ಆದರೆ ಸರ್ಕಾರದ ಎಂದು ಗೊಂದಲದ ಮಧ್ಯೆ ನಾವು ಸಮಸ್ಯೆಯಲ್ಲಿ ಸಿಕ್ಕಿಹಾಕಿಕೊಂಡಿದ್ದೇವಲ್ಲಾ. ಇದಕ್ಕೆ ಪರಿಹಾರ ಯಾವತ್ತು?

ಅಧ್ಯಕ್ಷರು :- ಸಮಸ್ಯೆ ಏನು ಎಂದು ನಿಮಗೂ ಗೊತ್ತು. ನನಗೂ ಗೊತ್ತು.

ಶ್ರೀ ಎ. ರಾಮದಾಸ್ :- ಆದರೆ ರಾಜಕಾರಣದ ಮಧ್ಯದ ಗೊಂದಲದಲ್ಲಿ ಈ ಒಂದು ಸಾರ್ವಜನಿಕವಾಗಿ ಏನು ಆವಶ್ಯಕತೆ ಇದೆ, ಅದು ಬಲಿಯಾಗುತ್ತಿದೆಯಲ್ಲಾ ಎಂದು ನಮಗೆ ಅನಿಸುತ್ತದೆ.

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಹೇಳಿದ್ದಾರಲ್ಲಾ, ಮಾಡಿಸುತ್ತೇನೆ ಎಂದು.

ಶ್ರೀ ಎ. ರಾಮದಾಸ್ :- ಯಾವಾಗ ಆಗುತ್ತದೆ?

ಅಧ್ಯಕ್ಷರು :- ಶೀಘ್ರದಲ್ಲಿ ಮಾಡಿಸಿಕೊಡುತ್ತಾರೆ.

ಶ್ರೀ ಆರ್. ಕೃಷ್ಣಪ್ಪ :- ಆದಷ್ಟು ಶೀಘ್ರ ಮಾಡಿಸಿಕೊಡುತ್ತೇನೆ.

ವಿಷಯ :- ಚಿಕ್ಕಮಗಳೂರಿನ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ ಖಾಲಿ ಇರತಕ್ಕ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 199 (1404)

ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಚಿಕ್ಕಮಗಳೂರು ನಗರದ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ ಒಟ್ಟು 22 ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಉಪನ್ಯಾಸಕರ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇದೆ, ಹಾಗೂ ಒಟ್ಟು ಇರಬೇಕಾದಂತಹ ಉಪನ್ಯಾಸಕರ ಸಂಖ್ಯೆ ಎಷ್ಟು;

ಇ) ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ಹಾಗೂ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಬಂದಿದೆ.

ಆ) ಸದರಿ ಹುದ್ದೆಗಳು ಸುಮಾರು 20 ವರ್ಷಗಳಿಂದ ಖಾಲಿ ಇವೆ. ಕಾಲೇಜಿನಲ್ಲಿ ಇರಬೇಕಾದ ಒಟ್ಟು ಉಪನ್ಯಾಸಕರ ಸಂಖ್ಯೆ : 65.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಇತ್ತೀಚೆಗೆ ಆಯ್ಕೆಯಾದ ಅಭ್ಯರ್ಥಿಗಳಿಂದ 13 ಮಂದಿಯನ್ನು ತುಂಬಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿತ್ತಿದೆ. ಉಳಿದ ಹುದ್ದೆಗಳನ್ನು ತುಂಬುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಸರ್ಕಾರಿ ಕಾಲೇಜು ಇದ್ದು ಉಪನ್ಯಾಸಕರ ಕೊರತೆ ಎರಡು-ಮೂರು ವರ್ಷಗಳಿಂದ ಇದೆ ಎಂದು ಹೇಳಿದ್ದಾರೆ. ಜೊತೆಗೆ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದಕ್ಕೆ 65 ಹುದ್ದೆಗಳು ಖಾಲಿ ಇವೆ ಎಂದು ಹೇಳುತ್ತಾರೆ. ಸರ್ಕಾರದ ನೀತಿಯ ಪ್ರಕಾರ ಆರೆಕಾಲಿಕ 960 ಶಿಕ್ಷಕರನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅವರ ಕಥೆ ಏನಾಯಿತು ಎಂಬುದು ನಮಗೆ ಗೊತ್ತಿಲ್ಲ. ಈ ಹುದ್ದೆಗಳು ಎರಡು-ಮೂರು ವರ್ಷಗಳಿಂದ ಖಾಲಿ ಇದ್ದು ಇವುಗಳನ್ನು ತುಂಬುವುದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದೂ ಸಹ ಗೊತ್ತಿಲ್ಲ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ತಮ್ಮ ಮುಖಾಂತರವಾಗಿ ಅವರಿಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ ಅವರ ಭವಿಷ್ಯ ಹೇಗೆ ಮುಂದುವರಿಯಬೇಕು ಎನ್ನುವುದರ ಬಗ್ಗೆ ಅವರು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು :- ಭವಿಷ್ಯ ಚೆನ್ನಾಗಿಲ್ಲದೇ ಹೋದರೆ ನಿಮ್ಮ ಮೇಲೆ ಎಲೆಕ್ಷನ್‌ಗೆ ನಿಂತು ಅಸೆಂಬ್ಲಿಗೆ ಆರಿಸಿಬರುತ್ತಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಆ ಪರಿಣಾಮವಂತೂ ಬಿದ್ದೇ ಬೀಳುತ್ತದೆ.

ವಿಷಯ :- ಅರಕಲಗೂಡು ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ.